**ಸಾಕ್ಷಿಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆಃ ವಾದಿ ಪರವಾಗಿ ಶ್ರೀ SPR ವಕೀಲರಿಂದಃ-**

ನಾನು ನನ್ನ ಮುಖ್ಯ ವಿಚಾರಣೆಯ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಸಂಗತಿಗಳು ಸತ್ಯವಾಗಿದ್ದು, ಅದನ್ನು ನಾನೇ ನಮ್ಮ ವಕೀಲರಿಗೆ ಹೇಳಿ ಬರೆಸಿರುತ್ತೇನೆ.

ಈ ದಾವೆಗೆ ಪೂರಕವಾಗಿ ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳಲ್ಲಿರುವ ಸಾಲದ ಅರ್ಜಿಯನ್ನು ನಿಪಿ 1 ಎಂದು, ಪತ್ರವನ್ನು ನಿಪಿ 2 ಎಂದು, Authorization letter ಅನ್ನು ನಿಪಿ 3 ಎಂದು, Sanction Memorandum ಅನ್ನು ನಿಪಿ 4 ಎಂದು Deed of Hypothecation of Vehicle ಅನ್ನು ನಿಪಿ 5 ಎಂದು, Pronote ಅನ್ನು ನಿಪಿ 6 ಎಂದು, Letter of Undertaking ಅನ್ನು ನಿಪಿ 7 ಎಂದು, ಒಂದು ಪತ್ರವನ್ನು ನಿಪಿ 8 ಎಂದು, ದಿನಾಂಕಃ 4-12-2020 ರ ಪತ್ರವನ್ನು ನಿಪಿ 9 ಎಂದು, ಒಂದು ಅರ್ಜಿಯನ್ನು ನಿಪಿ 10 ಎಂದು, ಒಂದು ರಶೀದಿಯನ್ನು ನಿಪಿ 11 ಎಂದು, ಒಂದು ಪತ್ರವನ್ನು ನಿಪಿ 12 ಎಂದು, ನಮೂನೆ ಡಿ ಅನ್ನು ನಿಪಿ 13 ಎಂದು, ದಿನಾಂಕಃ 21-02-2024 ರ ಕಾನೂನುಬದ್ದ ನೋಟಿಸನ್ನು ನಿಪಿ 14 ಎಂದು, ಅಂಚೆ ಎನ್ವಲಬನ್ನು ನಿಪಿ 15 ಎಂದು, ಅಂಚೆ ಸ್ವೀಕೃತಿ ಪತ್ರವನ್ನು ನಿಪಿ 16 ಎಂದು ಮತ್ತು ಪ್ರತಿವಾದಿಯ ಬ್ಯಾಂಕ ಸ್ಟೇಟಮೆಂಟನ್ನು ನಿಪಿ 17 ಎಂದು ಗುರುತಿಸಲಾಯಿತು.

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಹಾಗೂ ನಾನು ಹಾಜರುಪಡಿಸಿದ ದಾಖಲೆಗಳನ್ನು ಪರಿಗಣಿಸಿ ಸದರಿ ದಾವೆಯನ್ನು ಡಿಕ್ರಿ ಮಾಡಬೇಕಾಗಿ ಕೋರಿಕೊಳ್ಳುತ್ತೇನೆ.

**ಪಾಟೀ ಸವಾಲು ಪ್ರತಿವಾದಿ ಪರವಾಗಿ ವಕೀಲರು ಸಮಯ ಕೋರಿದ್ದು ಮತ್ತು ಪ್ರತಿವಾದಿ ಪ್ರತಿವಾದ ಪತ್ರವನ್ನು ಸಲ್ಲಿಸದೇ ಇರುವ ಕಾರಣ ಪಾಟೀಸವಾಲು ಇಲ್ಲ ಎಂದು ಪರಿಗಣಿಸಲಾಯಿತು.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**